**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**

**ಅಸಲು ದಾವಾ ಸಂ.183/2026 P.W.-1**

ದಿನಾಂಕಃ 10-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಹೆಚ್ ಎಸ್ ಎನ್ ವಕೀಲರಿಂದ

ಸಾಕ್ಷಿಯು ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕಾಲಂ 1 ರಲ್ಲಿ ತೋರಿಸಿದಂತೆ ನಿಶಾನೆಗೊಳಿಸಲಾಗಿದೆ.

| 1 | 2 |
|---|---|
| ನಿಪಿ-10 | ಆಧಾರ್ ಕಾರ್ಡ |
| ನಿಪಿ-11 | ಚುನಾವಣಾ ಗುರುತಿನ ಚೀಟಿ |
| ನಿಪಿ-12 | ಪಾನ್ ಕಾರ್ಡ |

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಜಿ ಪಿ ರವರಿಂದ ಃ-

ನನ್ನ ಮಗಳಾದ ಐಶ್ವರ್ಯರವರನ್ನು ಶಾಲೆಗೆ ನಾನೇ ಸೇರಿಸಿರುತ್ತೇನೆಂದರೆ ಸರಿ. ಅವರನ್ನು ಶಾಲೆಗೆ ದಾಖಲು ಮಾಡುವ ಸಮಯದಲ್ಲಿ ಎಲ್ಲಾ ವಿವರಗಳನ್ನು ನಾನೇ ನೀಡಿರುತ್ತೇನೆಂದರೆ ಸರಿ. ಶಾಲೆಗೆ ಸೇರಿಸುವಾಗ ಐಶ್ವರ್ಯರವರ ತಂದೆ ಹೆಸರನ್ನು ರಾಜಪ್ಪ ಸಿ.ಸಿ. ಎಂದು ನೀವೇ ಬರೆಸಿರುತ್ತಿರಾ ಎಂದರೆ ಸರಿಯಲ್ಲ. ನೀವು ನೀಡಿದ ಮಾಹಿತಿಯಂತೆ ತಂದೆ ಹೆಸರನ್ನು ರಾಜಪ್ಪ ಸಿ.ಸಿ. ಎಂದು ಶಾಲೆಯವರು ನಮೂದು ಮಾಡಿರುತ್ತಾರೆಂದರೆ ಸಾಕ್ಷಿ ನಾನು ನನ್ನ ಹೆಸರನ್ನು ಸಿ.ಸಿ. ರಾಜು ಎಂದು ನೀಡಿದ್ದು, ನನ್ನ ಮಗಳು ಓದುತ್ತಿದ್ದ 1 ನೇ ತರಗತಿಯ ಶಾಲೆಯವರು ಮಾಡಿದ ತಪ್ಪಿನಿಂದ ನನ್ನ ಹೆಸರು ರಾಜಪ್ಪ ಸಿ.ಸಿ. ಎಂದು ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳಲ್ಲಿ ರಾಜಪ್ಪ ಸಿ.ಸಿ. ಎಂದು ನಮೂದು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಎಲ್ಲಾ ದಾಖಲಾತಿಗಳಲ್ಲಿ ನನ್ನ

ಹೆಸರು ಸಿ.ಸಿ.ರಾಜು ಎಂದೆ ನಮೂದು ಇರುತ್ತದೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳ ತಪ್ಪಿನಿಂದ ನಿಮ್ಮ ಮಗಳ ಶಾಲಾ ದಾಖಲಾತಿಗಳಲ್ಲಿ ಯಾವುದೇ ತಪ್ಪು ಆಗಿರುವುದಿಲ್ಲ, ನೀವು ಸರಿಯಾದ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಸರಿಯಾದ ಮಾಹಿತಿ ನೀಡಿರುತ್ತೇನೆಂದು ನುಡಿದಿರುತ್ತಾರೆ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರು, ತರೀಕೆರೆ.